# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :- 57

ಮಾನ್ಯ ಸದಸ್ಯರ ಹೆಸರು :- ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ :- 15/07/2024.

ಉತ್ತರಿಸುವ ಸಚಿವರು :- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋವಿಡ್ ಸಂದರ್ಭದಲ್ಲಿ 2019 ರಿಂದ 2021ನೇ ಸಾಲಿನಲ್ಲಿ ಖರೀದಿಸಿದ ಸಾಮಗ್ರಿಗಳಲ್ಲಿ ಉಂಟಾದ ಭ್ರಷ್ಟಾಚಾರದ ಬಗ್ಗೆ ತನಿಖೆಗೆ ಆದೇಶಿಸಿದ್ದು, ತನಿಖೆಯು ಯಾವ ಹಂತದಲ್ಲಿವೇ; | ಕೋವಿಡ್-19ರ ಸಂದರ್ಭದಲ್ಲಿ ಮಾರ್ಚ್-2020 ರಿಂದ ಮಾರ್ಚ್-2022ರವರೆಗೆ ಕೋವಿಡ್-19 ನಿರ್ವಹಣೆಗಾಗಿ ಖರೀದಿಸಿದ ಸಾಧನ ಸಲಕರಣೆಗಳು, ಯಂತ್ರೋಪಕರಣಗಳು, ಸಾಮಗ್ರಿಗಳು ಇತ್ಯಾದಿಗಳಲ್ಲಿ ಉಂಟಾದ ಭ್ರಷ್ಟಾಚಾರದ ಬಗ್ಗೆ ಘನತೆವೆತ್ತ ಉಚ್ಚ ನ್ಯಾಯಾಲಯದ ಮಾನ್ಯ ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ಜಾನ್ ಮೈಕಲ್ ಕುನ್ಹ ಇವರ ನೇತೃತ್ವದಲ್ಲಿ ಕೋವಿಡ್-19ರ ವಿಚಾರಣಾ ಆಯೋಗವನ್ನು ಅಗಸ್ಟ್-2023ರ ಮಾಹೆಯಲ್ಲಿ ನೇಮಿಸಲಾಗಿರುತ್ತದೆ. ತನಿಖೆಯು ಪ್ರಗತಿಯಲ್ಲಿರುತ್ತದೆ. |
| ಆ) | ಈ ತನಿಖೆಯ ಮಧ್ಯಂತರ ವರದಿ ನೀಡಲಾಗಿದೆಯೇ; ಈ ತನಿಖೆಯನ್ನು ಯಾವಾಗ ಕೊನೆಗೊಳ್ಳಲಾಗುವುದು; (ವಿವರ ನೀಡುವುದು) | ಮಧ್ಯಂತರ ವರದಿ ಸಲ್ಲಿಸಿರುವುದಿಲ್ಲ. ತನಿಖೆಯು ಪ್ರಗತಿಯಲ್ಲಿರುತ್ತದೆ. |
| ಇ) | ಕೋವಿಡ್-19ಸಾಂಕ್ರಮಿಕ ಸಂದರ್ಭದಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಗ್ಯಾಸ್ ಅಭಾವ ಹಗರಣದಲ್ಲಿ ಆಸ್ಪತ್ರೆಯಲ್ಲಿ ಮೃತಪಟ್ಟ ಬಗ್ಗೆ ವಿಚಾರಣೆಯ ವರದಿ ಸರ್ಕಾರಕ್ಕೆ ಬಂದಿದೆಯೆ: ಈ ಬಗ್ಗೆ ಕೈಗೊಂಡ ಕ್ರಮಗಳೇನು: | ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದಾಗಿ ಮರಣ ಹೊಂದಿರುವ ಘಟನೆಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಲು ನೇಮಿಸಲಾಗಿದ್ದ ಮಾನ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ಬಿ.ಎ.ಪಾಟೀಲ್ ಇವರ ತನಿಖಾ ವರದಿಯನ್ನು ಒಪ್ಪದೇ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಗೌರವಾನ್ವಿತ ಶ್ರೀ ಜಾನ್ ಮೈಕಲ್ ಕುನ್ಹಾ ಇವರ ವಿಚಾರಣಾ ಆಯೋಗಕ್ಕೆ ವಹಿಸುವಂತೆ ಕೋರಿರುತ್ತದೆ. ಅದರಂತೆ ಪರಿಶೀಲಿಸಿ, ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದಾಗಿ ಮರಣ ಹೊಂದಿರುವ ಪ್ರಕರಣದ ಕುರಿತು ವಿಚಾರಣೆ ನಡೆಸಲು ಹಾಲಿ ಅಸ್ತಿತ್ವದಲ್ಲಿರುವ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಗೌರವಾನ್ವಿತ ಶ್ರೀ ಜಾನ್ ಮೈಕಲ್ ಕುನ್ಹಾ ವಿಚಾರಣಾ ಆಯೋಗಕ್ಕೆ ಹೆಚ್ಚುವರಿಯಾಗಿ ವಹಿಸಿ ಅಧಿಸೂಚನೆ ಸಂಖ್ಯೆ: ಹೆಚ್ ಡಿ 99 ಪಿಸಿಇ 2023, ದಿನಾಂಕ: 26/12/2024ರಲ್ಲಿ ಆದೇಶಿಸಲಾಗಿರುತ್ತದೆ. ತನಿಖೆಯು ಪ್ರಗತಿಯಲ್ಲಿರುತ್ತದೆ. |
| ಈ) | ಕೋವಿಡ್-19 ಸಂದರ್ಭದಲ್ಲಿ ಉಂಟಾದ ಭ್ರಷ್ಟಾಚಾರವನ್ನು ಉದ್ದೇಶಪೂರ್ವಕವಾಗಿ ಮುಚ್ಚಿಡಲಾಗುತ್ತಿದೆ ಎಂದು ಆರೋಪಗಳಿದ್ದು, ಈ ಬಗ್ಗೆ ಸರ್ಕಾರದ ನಿಲುವೇನು: ಈ ಬಗ್ಗೆ ಸರ್ಕಾರ ಕೈಗೊಂಡಕ್ರಮಗಳೇನು? | ಕೋವಿಡ್-19ರ ಸಂದರ್ಭದಲ್ಲಿ ಮಾರ್ಚ್-2020 ರಿಂದ ಮಾರ್ಚ್-2022ರವರೆಗೆ ಕೋವಿಡ್-19 ನಿರ್ವಹಣೆಗಾಗಿ ಖರೀದಿಸಿದ ಸಾಧನ ಸಲಕರಣೆಗಳು, ಯಂತ್ರೋಪಕರಣಗಳು, ಸಾಮಗ್ರಿಗಳು ಇತ್ಯಾದಿಗಳಲ್ಲಿ ಉಂಟಾದ ಭ್ರಷ್ಟಾಚಾರದ ಬಗ್ಗೆ ಘನತೆವೆತ್ತ ಉಚ್ಚ ನ್ಯಾಯಾಲಯದ ಮಾನ್ಯ ನಿವೃತ್ತ ನ್ಯಾಯಮೂರ್ತಿಗಳಾದ ಶ್ರೀ ಜಾನ್ ಮೈಕಲ್ ಕುನ್ಹ ಇವರ ನೇತೃತ್ವದಲ್ಲಿ ಕೋವಿಡ್-19ರ ವಿಚಾರಣಾ ಆಯೋಗವನ್ನು ಅಗಸ್ಟ್-2023ರ ಮಾಹೆಯಲ್ಲಿ ನೇಮಿಸಲಾಗಿರುತ್ತದೆ. ತನಿಖೆಯು ಪ್ರಗತಿಯಲ್ಲಿರುತ್ತದೆ. |

| | (ವಿವರ ನೀಡುವುದು) | |
|---|---|---|

ಆಕುಕ 65 ಎಂಎಸ್‌ಎ 2024.

**(ದಿನೇಶ್ ಗುಂಡುರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.